ಹಾಕಿರುವುದು-ರಿಜಿಸ್ಟರ್ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಮುಖ್ಯವಾಗಿ ನರಗುಂದ, ನವಲಗುಂದ ರೈತರ ಮೇಲೆ ಮತ್ತು ಬೆಂಗಳೂರಿನ ಮ್ಯಾಕನ್ಸ್ ಇಂಡಿಯಾ, ಹಿಮಾಲಯ ಡ್ರಗ್ಸ್, ಮೈಸೂರು ವೈರ್ ಅಂಡ್ ಮೆಟಲ್ಸ್ ಕಾರ್ಮಿಕರ ಹೋರಾಟಗಳ ಸಂದರ್ಭದಲ್ಲಿ ಹಾಗೂ 1980-81ರಲ್ಲಿ ಜರುಗಿದ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರ ಹೋರಾಟಗಳ ಸಂದರ್ಭದಲ್ಲಿ ನೂರಾರು ರೈತರ ಮತ್ತು ಕಾರ್ಮಿಕರ ವಿರುದ್ಧ ಪೊಲೀಸ್ ಕೇಸುಗಳನ್ನು ಹಾಕಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಇ) ಈ ಕೇಸುಗಳೆಲ್ಲವನ್ನು ವಾಪಸ್ಸು ಪಡೆಯಬೇಕೆಂದು ಸಂಬಂಧಪಟ್ಟವರಿಂದ ಮನವಿ ಪತ್ರಗಳು ಸರ್ಕಾರದವರಿಗೆ ಬಂದಿದೆಯೇ ;

ಈ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ(ಮಾನ್ಯ ಮುಖ್ಯಮಂತ್ರಿಗಳು) :—

ಅ) ಕಳೆದ ಮೂರು ವರ್ಷಗಳಲ್ಲಿ ರೈತರು ಮತ್ತು ಕಾರ್ಮಿಕರು ಚಳುವಳಿ ಮಾಡುವ ಸಮಯದಲ್ಲಿ ಹಿಂಸಾಚಾರದಲ್ಲಿ ತೊಡಗಿದ್ದ ಕಾರಣ ಅವರ ಮೇಲೆ ಪೊಲೀಸಿನವರು ಕೆಲವು ಕೇಸುಗಳನ್ನು ದಾಖಲು ಮಾಡಿಕೊಂಡಿರುತ್ತಾರೆ.

ಆ) ಪೊಲೀಸಿನವರು ನರಗುಂದ ನವಲಗುಂದ ರೈತರ ಮತ್ತು ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮೇಲೆ ದೊಕದ್ದಮೆಗಳನ್ನು ದಾಖಲೆ ಮಾಡಿಕೊಂಡಿದ್ದಾರೆ. ಪೊಲೀಸಿನವರು ಹಿಮಾಲಯ ಡ್ರಗ್ಸ್ ಮತ್ತು ಮೈಸೂರು ವೈರ್ ಮತ್ತು ಮೆಟಲ್ಸ್ ಕಾರ್ಮಿಕರ ಮೇಲೆಯೂ ಸಹ ಮೊಕದ್ದಮೆಗಳನ್ನು ದಾಖಲು ಮಾಡಿಕೊಂಡಿದ್ದಾರೆ. ಮ್ಯಾಕನ್ಸ್ ಇಂಡಿಯ ಎಂಬ ಹೆಸರಿನ ಕಾರ್ಖಾನೆ ಇರುವುದಿಲ್ಲ. ಆದಾಗ್ಯೂ ಪೊಲೀಸಿನವರು 1979ನೇ ಸಾಲಿನಲ್ಲಿ ಮ್ಯಾಕನ್ಸ್ ಇಂಡಿಯ, ಬೆಂಗಳೂರು ಇದರ ಕಾರ್ಮಿಕರ ಮೇಲೆ ಮೊಕದ್ದಮೆಗಳನ್ನು ದಾಖಲು ಮಾಡಿಕೊಂಡಿದ್ದಾರೆ.

ಇ) ಹೌದು.

ಈ) ಸರ್ಕಾರವು ಈಗಾಗಲೇ ನರಗುಂದ, ನವಲಗುಂದ ರೈತರ ಸಂಬಂಧದ ಎಲ್ಲಾ ಕೇಸುಗಳನ್ನು ವಾಪಸ್ಸು ಪಡೆಯಲು ಆಜ್ಞೆ ಮಾಡಲಾಗಿದೆ. ಕೇಂದ್ರದ ಪ್ರವಾನುಮತಿಗೆ ಕಾಯುತ್ತಿರುವ 'ರೈಲ್ ರೋಖೋ' ಸಂಬಂಧದ ಕೇಸುಗಳನ್ನು ಬಿಟ್ಟು ಉಳಿದ ಸಾರ್ವಜನಿಕ ಕ್ಷೇತ್ರದ ನೌಕರರ ಸಂಬಂಧದಲ್ಲಿ ದಾಖಲು ಮಾಡಿರುವ ಎಲ್ಲಾ ಕೇಸುಗಳನ್ನೂ ಹಿಂತೆಗೆದುಕೊಳ್ಳಲಾಗಿದೆ. ಪ್ರಶ್ನೆ 'ಆ'ನಲ್ಲಿ ನಮೂದಿಸಿರುವ ವಿಶಿಷ್ಟ ಯೂನಿಟ್‌ಗಳಿಗೆ ಸಂಬಂಧಿಸಿದ ಕೇಸುಗಳನ್ನು ವಾಪಸ್ ಪಡೆಯಲು ಬಂದಿರುವ ಮನವಿ ಪತ್ರಗಳು ಸರ್ಕಾರದ ಪರಿಶೀಲನೆಯಲ್ಲಿವೆ.

41. ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ (ಗುಳೇದಗುಡ್ಡ).—ಆರೋಗ್ಯ ಮತ್ತು ಕುಟುಂಬ ಇಲಾಖೆಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :

ಅ) ಹುನಗುಂದ ತಾಲ್ಲೂಕು ಸೂಳೇಭಾವಿ ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿಯನ್ನು ನೇಮಿಸುವ ವಿಚಾರ ಸರ್ಕಾರಕ್ಕೆ ಇದೆಯೇ ;

ಆ) ವೈದ್ಯಾಧಿಕಾರಿಯ ಜಾಗ ಖಾಲಿ ಇದ್ದು ವೈದ್ಯಾಧಿಕಾರಿಯನ್ನು ನೇಮಿಸುವಲ್ಲಿ ವಿಳಂಬವಾಗಲು ಕಾರಣಗಳನ್ನು ತಿಳಿಸುವುದು ;

ಇ) ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು ;

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಮಂತ್ರಿಗಳು):—

ಅ) ಇದೆ.

ಆ) ಆಯ್ಕೆಯಾದ ವೈದ್ಯಾಧಿಕಾರಿಗಳ ಪಟ್ಟಿ ಕರ್ನಾಟಕ ಲೋಕಸೇವಾ ಆಯೋಗದಿಂದ ಬರಬೇಕಾಗಿದೆ.

ಇ) ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಯಾದ ವೈದ್ಯಾಧಿಕಾರಿಳಿಗ ಪಟ್ಟಿ ಬಂದ ಕೂಡಲೇ ನೇಮಕಾತಿಯನ್ನು ಮಾಡಲಾಗುವುದು.

40. ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ (ಗುಳೇದಗುಡ್ಡ).—ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ಗುಳೇದಗುಡ್ಡ ವಸ್ತುದ ಜನರಲ್ ಆಸ್ಪತ್ರೆಗೆ ಹಳೆ ಎಕ್ಸ್‌ರೇ ಯಂತ್ರವನ್ನು ತಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಾದರೆ ಅದರ ಉಪಯೋಗ ಯಾಕೆ ಆಗುತ್ತಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಮಂತ್ರಿಗಳು) :—

ಅ) ಬಂದಿದೆ.

ಆ) ಈ ಯಂತ್ರಳಗಲ್ಲಿ ಕೆಲವು ನ್ಯೂನತೆಗಳು ಉದ್ಭವಿಸಿರುವುದರಿಂದ ಇದು ಕೆಲಸ ಮಾಡುತ್ತಿಲ್ಲ.

43. ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ (ಗುಳೇದಗುಡ್ಡ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ಕಳೆದ ತಿಂಗಳು ದಿನಾಂಕ 17-2-83ರಂದು ವಿಜಾಪುರದಲ್ಲಿ ನಡೆದ ಬೆಂಕಿ ಅನಾಹುತದ ವಿವರ ಸರಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ ನೊಂದ ಕುಟುಂಬದವರಿಗೆ ಸರಿಯಾದ ಪರಿಹಾರ ಕೊಡಲಾಗಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು) :—

ಅ) 17-2-83ರಂದು ಬಿಜಾಪುರದಲ್ಲಿ ಮತೀಯ ಗಲಭೆ ಸಂಭವಿಸಿದ್ದು, ಆ ಸಮಯದಲ್ಲಿ ಮಾರು ಕಟ್ಟೆ ಪ್ರದೇಶ, ಮತ್ತು ಇತರ ಸ್ಥಳಗಳಲ್ಲಿ ಬೆಂಕಿ ಹಚ್ಚಿದುದರಿಂದ ಆಸ್ತಿಪಾಸ್ತಿಗೆ ನಷ್ಟ/ಹಾನಿ ಉಂಟಾಯಿತು.

ಆ) ಸದರಿ ಗಲಭೆಯಲ್ಲಿ ಹಾನಿಗೊಳಗಾದ 245 ವ್ಯಕ್ತಿಗಳಿಗೆ 5,27,200 ರೂ.ಗಳ ಅನುಗ್ರಹ ಪೂರ್ವಕ ಪರಿಹಾರ ಧನ ಮಂಜೂರು ಮಾಡಲಾಗಿದೆ. 10 ಲಕ್ಷ ರೂ.ಗಳ ಬಡ್ಡಿರಹಿತ ಸಾಲವನ್ನು ಸಹ ಮಂಜೂರು ಮಾಡಲಾಗಿದೆ.

43. ಶ್ರೀ ಪಿ. ರಾಮದೇವ್ (ಮಲ್ಲೇಶ್ವರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ಇತ್ತೀಚೆಗೆ ರಾಜ್ಯದಲ್ಲಿರುವ ಎಷ್ಟು ಪೊಲೀಸ್ ಅಧಿಕಾರಿಗಳನ್ನು ಡೈರೆಕ್ಟರ್ ಜನರಲ್ ಆಗಿ ನೇಮಿಸಲಾಯಿತು ;

ಆ) ಯಾವ ಆಧಾರದ ಮೇರೆಗೆ ಈ ಬಡ್ತಿ ನೀಡಲಾಯಿತು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು) :

ಅ) ಮೂರು ಜನ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಇತ್ತೀಚೆಗೆ ಡೈರೆಕ್ಟರ್ ಜನರಲ್ ಆಗಿ ನೇಮಿಸಲಾಯ್ತು.

ಆ) ಅವಶ್ಯಕತೆಯ ಆಧಾರದ ಮೇಲೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 44. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಳಿಗಗೆ ಉತ್ತರಿಸುವರೆ :—

ಅ) ಕನ್ನಡ ಓದಲು, ಬರೆಯಲು ಹಾಗೂ ಮಾತನಾಡಲು ಬಲ್ಲ ರಾಜ್ಯದ ಐ. ಎ. ಎಸ್. ಹಾಗೂ ಐ. ಪಿ. ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ;

ಆ) ಕನ್ನಡ ಓದಲು, ಬರೆಯಲು ಹಾಗೂ ಮಾತನಾಡಲು ಬಾರದಂತಹ ಐ.ಎ.ಎಸ್. ಹಾಗೂ ಐ. ಪಿ. ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ;

ಇ) ಅಂತಹ ಅಧಿಕಾರಿಗಳು ಕನ್ನಡವನ್ನು ಓದಲು, ಬರೆಯಲು ಹಾಗೂ ಮಾತನಾಡಲು ಕಲಿಸುವುದಕ್ಕೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು) :—

ಅ) ಆ) ವರಿಷ್ಠ ಕಾಲಮಾನ ವೇತನ ಶ್ರೇಣಿಗೆ ಬಡ್ತಿ ಕೊಡಬೇಕಾದರೆ ಎಲ್ಲ ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳೂ ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲೇಬೇಕೆಂದು ಸರಕಾರವು ಕಡ್ಡಾಯ ಮಾಡಿದೆ. ಆದ್ದರಿಂದ ಈ ಅಧಿಕಾರಿಗಳೆಲ್ಲರೂ ಕನ್ನಡವನ್ನು ಓದಲು, ಬರೆಯಲು ಮತ್ತು ಮಾತನಾಡಲು ಕಲಿತೇ ಕಲಿಯುತ್ತಾರೆ.

ಇ) ಪ್ರಾರಂಭದ ತರಬೇತಿಯ ಅಂಗವಾಗಿ ಪ್ರತಿಯೊಬ್ಬ ಖಾಯಂಪೂರ್ವ ತರಬೇತುದಾರನಿಗೂ ಮೈಸೂರಿನಲ್ಲಿರುವ ಕೇಂದ್ರ ಭಾರತೀಯ ಭಾಷೆಗಳ ಸಂಸ್ಥೆಯಲ್ಲಿ ಕನ್ನಡ ಭಾಷೆಯಲ್ಲಿ ತರಬೇತಿಯನ್ನು ಕೊಡಲಾಗುತ್ತದೆ. ಕನ್ನಡ ಭಾಷೆಯಲ್ಲಿ ಪ್ರಾವೀಣ್ಯತೆಯನ್ನು ಹೊಂದಲು ಪ್ರತಿಯೊಬ್ಬ ತರಬೇತುದಾರನು ಒಬ್ಬ ಶಿಕ್ಷಕನ ನೆರವನ್ನು ಪಡೆಯಬಹುದು. ವರಿಷ್ಠ ಕಾಲಮಾನ ವೇತನ ಶ್ರೇಣಿಗೆ ಬಡ್ತಿ ಹೊಂದಲು ಪ್ರತಿಯೊಬ್ಬ ಐಎಸ್ ಮತ್ತು ಐಪಿಎಸ್ ಅಧಿಕಾರಿಯೂ ಕರ್ನಾಟಕ ಲೋಕ ಸೇವಾ ಆಯೋಗದವರು ವಿಧಿಸಿದ ಕನ್ನಡ ಭಾಷೆಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಲೇಬೇಕು.

ಉಪಾಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಮನವಿಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾದಗಿರಿ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಇಬ್ಬರು ಹರಿಜನರು ಸತ್ತುಹೋಗಿದ್ದಾರೆ. 25 ಜನ ಗಾಯಗೊಂಡಿದ್ದಾರೆ. 150 ಗುಡಿಸಲುಗಳು ಸುಟ್ಟುಹೋಗಿವೆ. ಸುಮಾರು 15 ಲಕ್ಷ ರೂಪಾಯಿ ನಷ್ಟವುಂಟಾಗಿದೆ.

ಉಪಾಧ್ಯಕ್ಷರು.—ತಾವು ನನ್ನ ಛೇಂಬರ್‌ನಲ್ಲಿ ಹೇಳಿದ್ದೀರಿ. ನಾನು ಅರ್ಥ ಮಾಡಿಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಹಳ್ಳಿಗೆ ಇನ್ನೂ ಜಿಲ್ಲಾಧಿಕಾರಿಗಳು ಅಥವಾ ಸಂಬಂಧಪಟ್ಟ ಅಧಿಕಾರಿಗಳು ಹೋಗಿಲ್ಲ. 25 ಲಕ್ಷ ರೂಪಾಯಿಯ ಹರಿಜನರ ಆಸ್ತಿ ಹಾಳಾಗಿ ಹೋಗಿದೆ. ಸುಮಾರು